Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

Sri

# ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ ಸುಬ್ಬರಾಯರು

[ 2, ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನಪೈ

Protect the Cow
ಗೋಸಂರಕ್ಷಣೆ ಮಾಡಿ

## ಒಂದು ಸಲಹೆ

ವಾಷಿಂಗ್ಟನ್— ಭಾರತದಲ್ಲಿ ಸೋಮಾರಿಯಾಗಿ ಬದ್ದಿಂವ ಅಮೇರಿಕಾದ ಮಾಲೀಕತ್ವದ 331 ವಿ.ಲಿಯ ಭಾರತದ ೦೮೦ಯಿಗಳನ್ನು ರಾಷ್ಟ್ರೀಯ ಕುಟುಂಬ ಭೋಜನೆಗೆ ಉಪಯೋಗಿಸುವಂತೆ ಹಾರ್ವರ್ಡ್ ಬ್ಯಾಗಜೈನಿನ ಸಂಪಾದಕರು ಸಲಹೆ ಮಾಡಿದ್ದಾರೆ.

★

## ಮುಖ್ಯ ಮಂತ್ರಿಗಳ ಹೇಳಿಕೆ

ಮೈಸೂರು— ನಗರಕ್ಕೆ ದಸರಾಕ್ಕೆ ಬರುವ ಜನಸಂದಣಿಗೆ ಆಹಾರ ಒದಗುವುದಕ್ಕೆ ತಕ್ಕ ಏರ್ಪಾಟು ಮಾಡಲಾಗಿದೆಯೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಹೇಳಿದರು — ವರ್ಷಕೂಟ ತಮಗೆ ಸ್ವಲ್ಪ ನಷ್ಟವಾದರೂ ಆಹಾರಧಾನ್ಯ ವ್ಯಾಪಾರದಲ್ಲಿ ಸಹಕರಿಸುವದಾಗಿ ಭಾವಿಸಿ ಇತ್ತಿರುವರೆಂದೂ ಹೇಳಿದರು.

❀

## ಪೋಟೋರಾಮಕಾರು

ವಿಶ್ವದ ಪೋಟೋರಾಮಕಾರು ತಯಾರಿಯಲ್ಲಿ ಅಮೇರಿಕಾ ಪ್ರಥಮ ಸ್ಥಾನವನ್ನೂ ಜರ್ಮನ್ನು ಎಪಬ್ಲಿಕ್ ಎಂಡನೇ ಸ್ಥಾನವನ್ನೂ ಬ್ರಿಟನ್ನು ಮೂರನೇ ಸ್ಥಾನವನ್ನೂ ಫ್ರಾನ್ಸು ನಾಲ್ಕನೇ ಸ್ಥಾನವನ್ನೂ ರಷ್ಯಾ ಐದನೇ ಸ್ಥಾನವನ್ನೂ ಪಡೆದಿವೆ.

## ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

2 ಶುಕ್ರವಾರ ದ್ವಾದಶಿ ಆಶ್ಲೇಷ-ಮಖ
ಗಾಂಧೀ ಜಯಂತಿ

——

ನಾಳೆ ಮಹಾತ್ಮ ಗಾಂಧೀಜೀ ಜಯಂತಿ ಪ್ರಯುಕ್ತ 'ಸತ್ಯವಾದಿ'ಗೆ ರಜವಿದೆ

## ನಾಳೇ ದಿವಸ
## ಮಹಾತ್ಮಾ ಗಾಂಧೀಜೀ ಯವರ ಜಯಂತಿ

ನವದೆಹಲಿ— ಕೇಂದ್ರ ಮಂತ್ರಿಗಳ ಭೋಗ ಕಾರುಗಳ ಬದಲು ಚಿಕ್ಕ ಕಾರುಗಳನ್ನು ಉಪಯೋಗಿಸಲು ತಾವು ಸೂಚಿಸುವುದಾಗಿ ಪ್ರಧಾನಿ ಶಾಸ್ತ್ರಿಗಳು ರಾಜ್ಯಸಭೆಯಲ್ಲಿ ತಿಳಿಸಿದರು.

❀

ಬೆಂಗಳೂರು— ನಗರದಲ್ಲಿ 5000 ವ್ಯಾನುಹೋಲುಗಳಿದ್ದು, ಈಗ 700 ಕ್ಕೆ ಮುಚ್ಚಳಗಳಿಲ್ಲವೆಂದು ಹೇಳಲಾಗಿದೆ

★

ವಿಜಯವಾಡ— ವಿಜಯವಾಡದಲ್ಲಾದ ಭೀಕರ ಮಳೆಯು ಪರಿಣಾಮವಾಗಿ ವಿಜಯವಾಡ ಮದ್ರಾಸಿಗೂ, ವಿಜಯವಾಡ ಹೈದರಾಬಾದಿಗೂ ಟೆಲಿಫೋನು ಮತ್ತು ಟೆಲಿಗ್ರಾಂ ಸಂಪರ್ಕ ಕಡಿದು ಹೋಗಿದೆ

★

ಸೋಲಾಪುರ— ಅಕಲಕೋಟೆಯಲ್ಲಿ ಆಹಾರಧಾನ್ಯ ಗೋಡೌನುಗಳನ್ನು ಗುಂಪು ಪ್ರಯತ್ನಿಸಿದಾಗ ಚದುರಿಸಲು ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು

★

ನವದೆಹಲಿ— ತಮ್ಮ ವಿದೇಶ ಪ್ರವಾಸದಲ್ಲಿ ಪಂಜಿಯನ್ನೇ ಉಟ್ಟಿರುವುದಾಗಿ ಪ್ರಧಾನಿ ಶಾಸ್ತ್ರಿಗಳು ತಿಳಿಸಿದರು.

# ಮಂತ್ರಿಮಂಡಲದ ರಾಜೀನಾಮೆಗೆ
# ಕೇಳಿಕೆ

ಬೆಂಗಳೂರು— ಹೈಕೋರ್ಟು ನ್ಯಾಯಾಧೀಶರ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ವೈಸೂರು ವಿಧಾನಸಭೆಯ ಅಧ್ಯಕ್ಷರಾಗಿ ಶ್ರೀ ಎಂ. ವೆಂಕಟಲಿಂಗಯ್ಯನವರು ಮತ್ತು ಉಪಾಧ್ಯಕ್ಷರಾಗಿ ಶ್ರೀ ಬಿ ಬೀಲಯ್ಯನವರು, ನಿನ್ನೆ ನಡೆದ ವಿಧಾನ ಸಭೆಯ ವಿಶೇಷ ಎಸಟಿಂಗಿನಲ್ಲಿ ಚುನಾಯಿತರಾದರು. ಅವರಿಗೆ 21 ಮತಗಳು ಬಂದವು

ಶ್ರೀಗಳಾದ ಹೆಚ್ ಕೆಂಪೇಗೌಡರು, ಬಿ ಎನ್ ಕೆಂಗೇಗೌಡರು, ಎಂ ಶಿ ಲಿಂಗಯ್ಯನವರು ವಿಜಯಿಗಳನ್ನು ಅಭಿನಂದಿಸಿದರು.

ಚುನಾವಣಾಧಿಕಾರಿಯಾದ ಪುಂಸಭಾ ಕವಿಷನರು ಶ್ರೀ ವಿಶ್ವನಾಥ್‌ರವರು ಚುನಾವಣೆಯನ್ನು ನಡೆಸಿದರು

## ಅಪಾಯ ಮರಣ

ಆಂಧ್ರದ ಮಚ್ಚಿರಾದಲ್ಲಿ ನೀರಾವರಿ ಅಣೆಕಟ್ಟು ಒಡೆದು 100 ಮಂದಿ ಸತ್ತಿರೆಂದು ಪಂದಿಯಾಗಿದೆ — 10 ಅಡಿ ನೀರು ನಿಂತಿದೆ — ಕೃಷ್ಣಾ ನದಿಯ ಪ್ರವಾಹ ಇಂದೆ

★

ಅಲಹಾಬಾದಿನ ಫುಲ್ಪುರ ಕ್ಷೇತ್ರದಿಂದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಲೋಕಸಭೆಗೆ ಸ್ಪರ್ಧಿಸಬಹುದು.

★

ಹೈದರಾಬಾದು— ಮನವಾಟು ಪಟ್ಟಣದಲ್ಲಿ ಹೆಚ್ಚು ಆಹಾರಧಾನ್ಯ ಕೇಳಲು ಒಂದ ಗುಂಪು ಕಲ್ಲು ಹೊಡೆದುದರಿಂದ ಕೆಲ ಅಧಿಕಾರಿಗಳೂ ನೌಕರರೂ ಗಾಯಗೊಂಡರು.

ಬೆಂಗಳೂರು— ಹೈಕೋರ್ಟು ನ್ಯಾಯಾಧೀಶರ ಸುಪ್ರೀಂಕೋರ್ಟು ಮಂತ್ರಿಮಂಡಲದ ಅನೇಕ ಆಡಳಿತ ನೀತಿಗಳು ನ್ಯಾಯಬಾಹಿರವೆಂತ್ತು ರಾಜ್ಯಾಂಗ ವಿರೋಧವೆಂದು ಘೋಷಿಸಿರುವುದರಿಂದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತಿತರ ಮಂತ್ರಿಗಳು ರಾಜೀನಾಮೆ ಕೊಡುವಂತೆ ಶಾಸನಸಭಾ ಸದಸ್ಯರೂ; ಎಸ್ಸೆಸ್ಪಿ ಕರ್ನಾಟಕ ಶಾಖೆಯ ಅಧ್ಯಕ್ಷರೂ ಆದ ಶ್ರೀ ಶಿವಪ್ಪನವರು ಕೇಳಿಕೆ ಹಾಕಿದ್ದಾರೆ.

★

ಉತ್ತರ ಪ್ರದೇಶ ವಿಧಾನ ಸಭೆಯ ಸ್ಪೀಕರರು ಲಕ್ನೋ ವಿಭಾಗದ ಹೈಕೋರ್ಟು ನ್ಯಾಯಾಧೀಶರು ಮತ್ತು ವಕೀಲರ ವಿರುದ್ಧ ನಡವಳಿಕೆ ಕೈಗೊಂಡು, ನ್ಯಾಯಾಂಗ ಹಾಗೂ ಶಾಸಕಾಂಗ ಇವುಗಳಲ್ಲಿ ಯಾವುದವೆದ್ದು, ರಾಷ್ಟ್ರಪತಿಯವರು ಘಟನೆಯ 403 ನೇ ವಿಧಿ ಪ್ರಕಾರ ಸುಪ್ರೀಂ ಕೋರ್ಟಿಗೆ ಅಭಿಪ್ರಾಯ ಪಡೆಯಲು ಕಳಿಸಿದ್ದರು ಹೈಕೋರ್ಟು ಅಗೌರವ ಮಾಡಿದಂತೆ ಆಗಿಲ್ಲವೆಂದು ಸುಪ್ರೀಂ ಕೋರ್ಟು ಅಭಿಪ್ರಾಯ ಪಟ್ಟಿದೆ

ಪ್ರಜಾಪ್ರಭುತ್ವ ಸಮಾಜವಾದ ಸ್ಥಾಪನೆಗೆ ಸದಾಚಾರ ಮಾರ್ಗವೊಂದೇ ದಾರಿ ಎಂದು ಕೇಂದ್ರ ಗೃಹ ಮಂತ್ರಿ ಶ್ರೀ ಗುಲ್ಜಾರಿಲಾಲ್ ನಂದಾ ಕಲ್ಕತ್ತಾದಲ್ಲಿ ತಿಳಿಸಿದರು

ಉತ್ಕಲ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮುನ್ನೂರು ವಿದ್ಯಾರ್ಥಿಗಳು ಉಪವಾಸ ಆರಂಭಿಸಿರುವರೆಂದು ಭುವನೇಶ್ವರ ವಾರ್ತೆ

ಪಂಜಾಬಿನ ಮಾಜಿ ಮುಖ್ಯಮಂತ್ರಿ ಕೈರೋನರ ಮಗ ಸುರೀಂದರ ಸಿಂಗರಿಗೆ ಜಾಮೀನು ಮೇಲೆ ಬಿಡುಗಡೆ ಆಗಲಿಲ್ಲವೆಂದು ಚಂಡೀಗಢ ವಾರ್ತೆ

—

ಜರ್ಮನ್ ವಿಶ್ವವಿದ್ಯಾನಿಲಯದಲ್ಲಿ ತಮಿಳು ಅಧ್ಯಾಪಕರು

ಮದ್ರಾಸು— ಪ್ರಸ್ತುತ ಮದರಾಸಿನ ಲೊಯೋಲಾ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಶ್ರೀ ಜೇಸಯ್ಯ ಎಂ ಎ ಅವರು ಜರ್ಮನ್ ಫೆಡರಾಲು ರಿಪಬ್ಲಿಕ್ಕಿನ ಹೀಡಲುಬರ್ಗ್ ವಿಶ್ವವಿದ್ಯಾನಿಲಯದಲ್ಲಿ ತಮಿಳು ಅಧ್ಯಾಪಕರಾಗಿ ಕೆಲಸ ಮಾಡಲು ಒಪ್ಪಿಕೊಂಡಿದ್ದಾರೆ.

ಭಾರತೀಯ ಮಳಿಗೆಯಲ್ಲಿ ಜರ್ಮನ್ ಅಧ್ಯಕ್ಷರು

ಬರ್ಲಿನ್— ಈಗ ಇಲ್ಲಿ ನಡೆಯುತ್ತಿರುವ ಅಫ್ರೊಏಷ್ಯನ್ ವ್ಯಾಪಾರೀ ಪ್ರದರ್ಶನಕ್ಕೆ ಭೇಟಿ ಇತ್ತ ಪಶ್ಚಿಮ ಜರ್ಮನಿಯ ಅಧ್ಯಕ್ಷರಾದ ಡಾ || ಹೆನ್ರಿಚ್ ಲಾಬ್ಕೆಯವರು ಭಾರತೀಯ ಮಳಿಗೆಗೆ ಭೇಟಿ ಇತ್ತು ತಮಗಿರುವ ಭಾರತದ ಬಗೆಗಿನ ಅಭಿಮಾನವನ್ನು ವ್ಯಕ್ತಪಡಿಸಿದರು— ಭಾರತೀಯ ಮಳಿಗೆಗಳಲ್ಲಿ ಪ್ರದರ್ಶಿತವಾಗಿದ್ದ ಉಣ್ಣೀ ರತ್ನಕಂಬಳಿಗಳು ಅಧ್ಯಕ್ಷರ ಮನಸೆಳೆದವು.

ಶಹಂ ಔಂ ಸಪ್ಪ ಚಿತ್ರಕ್ಕೆ ಪುರಸ್ಕಾರ

ವಾರ್ಸಾ— ಕಾರ್ಲೋವಿ ವಾರಿಯ ಅಂತಾರಾಷ್ಟ್ರೀಯ ಚಲಚಿತ್ರ ಮಹೋತ್ಸವದಲ್ಲಿ ಪ್ರದರ್ಶಿಸಲ್ಪಟ್ಟ ಶಹಂ ಔರ್ ಸಪ್ಪ ಚಿತ್ರಕ್ಕೆ ಜೆಕೊಸ್ಲೋವ್ ಸಂಗೀತ ಅಕಾಡಮಿ ಪುರಸ್ಕಾರ ನೀಡಿದೆ.

ಮುಟ್ಟುಗೋಲಾದ ಪುಸ್ತಕ

ನವದೆಹಲಿ— ಅನಾಲೂಸಿ ಸ್ಯಾಟ್ಸಂಗ್ ಬರೆದಿರುವ 'ಟಿಬೆಟ್ಸ್ ಇಂಟರ್ವ್ಯೂಸ್' ಎಂಬ ಪುಸ್ತಕದ ಪ್ರತಿಗಳ ಮೇಲೆ ಭಾರತ ಸರಕಾರವು ಮುಟ್ಟುಗೋಲು ಹಾಕಿದೆ — ಈ ಪುಸ್ತಕದ ಪ್ರತಿಗಳನ್ನು ಳ್ಳವರು ಸಮೀಪದ ಪೋಲೀಸು ಠಾಣೆಗಳಿಗೆ ತಲಪಿಸುವಂತೆ ತಿಳಿಸಲಾಗಿದೆ.

ದಸರಾ ಕ್ರೀಡೆಗಳು

ಮೈಸೂರು— ಪದ್ಧತಿಯಂತೆ ನಡೆಯುವ ದಸರಾ ಕ್ರೀಡೆಗಳ ಸ್ಪರ್ಧಿಗಳು 1-10-64 ಮಧ್ಯಾಹ್ನ 12 ಗಂಟೆಯೊಳಗೆ ಮುನಿಸಿಪಲ್ ಆಫೀಸಿನಲ್ಲಿ ಕಮೀಷನರವರಿಗೆ ಅರ್ಜಿ ಸಲ್ಲಿಸಬೇಕು.

———

ದಿವ್ಯವಾಣಿ

ಅನಿತ್ಯವಾದ ವುಗಳಿಂದ ನಿತ್ಯವು ಎಂದೆಗೂ ಲಭಿಸದು.

ಗುಣವನ್ನು ಕೇಳು, ರೂಪನ್ನ ವಿಚಾರಿಸಬೇಡ.

ಒಡಕನವು ಒಬ್ಬನಲ್ಲಿರುವ ಅನೇಕ ಸದ್ಗುಣಗಳನ್ನು ಸಹ ಅಡಗಿಸುವುದು.


ರಣಜಿತ್‌ನಲ್ಲಿ— 2-10-64 ರಿಂದ

ಆಮೋಘ ಪ್ರಾರಂಭ

— ಮನಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅಶ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನಂಜಿಂಹಂತರಾಜು

ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು —ಕರ್ನಾಟಕ ಫಿಲ್ಮ್ಸ್ ಹಂಚಿಕೆ

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ವುಡ್‌ಲಾಂಡ್ ಯಶಸ್ವಿ 3 ನೇ ವಾರ

ಶಿಸ್ಸು

.... ಎ. ವಿ ಎಂ. ರವರ ಆತ್ಮಮೋಘ ಹಿಂದಿ ಚಿತ್ರ ....

ಪೂಜಾ ಕೆ ಪೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹ, ನಿಮ್ಮಿ, ಧರ್ಮೇಂದ್ರ ಪ್ರಾಣ

[ ದಿನವಹಿ 3 ಪ್ರದರ್ಶನಗಳು ]

ಅಪೆರಾ— ಜನಭರಿತ 2 ನೇ ವಾರ

ಆತ್ಮಮೋಘ ಕನ್ನಡ ಚಿತ್ರ [ ದಿನ 3 ಆಟಗಳು ]

ಪೋಲೀಸ್ ಮಾನರ್

ಪಾತ್ರ— ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI SUDHA

Superb Tonic


## Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಗೆ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿಮಾನಿಗಳು ರೂ 10 ( ಒಂದೇ ಸಾರಿ ) ಸಹಾಯಕರು ರೂ 25 (ಒಂದೇ ಸಾರಿ )

ವಿಳಾಸ— ಗೋರಕ್ಷಣ ಆಫೀಸು ಚಾಮುಂಪುರಂ, ಮೈಸೂರು 4

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು—

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು

ಶ್ರೀ ಬಿ ಜಿ ಶಾಸ್ತ್ರಿಗಳು ( ದ ರೈಲ್ವೆ ) ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನಂಜಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಂಪಭಾ, ಹೊಂಗನೂರು

ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮುಂರಾಜಪುರಂ, ಮೈಸೂರು 4


Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4